## ಬೆಳ್ಳಿ ಹಬ್ಬ ಆಚರಿಸಿಕೊಂಡ ಶ್ರೀಕೃಷ್ಣ ಮಿಲ್ಕ್ಸ್

# ನೂತನ ಉತ್ಪನ್ನ ಬಿಡುಗಡೆ



ಶ್ರೀಕೃಷ್ಣ ಮಿಲ್ಕ್ಸ್ ಕಂಪನಿಯ ರಜತ ಮಹೋತ್ಸವದ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಕಂಪನಿಯ ನೂತನ ಉತ್ಪನ್ನಗಳನ್ನು ಬಿಡುಗಡೆಗೊಳಿಸಲಾಯಿತು. ಪ್ರದೀಪ ಪೈ, ದಿನೇಶ ಆರ್. ಪೈ, ವಿವೇಕ ಪವಾರ, ಶ್ಯಾಮ ಕಾಮತ, ಹನುಮಂತ ಪೈ, ಮಹೇಶ ಕಾಮತ ಇದ್ದರು.

ಹುಬ್ಬಳ್ಳಿ: ಖಾಸಗಿ ರಂಗದ ಪ್ರಮುಖ ಕಂಪನಿ ಶ್ರೀಕೃಷ್ಣ ಮಿಲ್ಕ್ಸ್ ರಜತ ಮಹೋತ್ಸವ ಗುರುವಾರ ಡೆನಿಸನ್ಸ್ ಹೋಟೆಲ್ ಆವರಣದಲ್ಲಿ ಸಂಭ್ರಮದಿಂದ ನೆರವೇರಿತು.

ಅತಿಥಿಯಾಗಿ ಪಾಲ್ಗೊಂಡಿದ್ದ ಉದ್ಯಮಿ ವಿವೇಕ ಪವಾರ, ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಕಂಪನಿ ಹೊರತಂದಿರುವ ನೂತನ ಉತ್ಪನ್ನಗಳಾದ ರಸಗುಲ್ಲಾ ಹಾಗೂ ಗುಲಾಬ್ ಜಾಮೂನ್ ಪ್ಯಾಕೆಟ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿ ಮಾತನಾಡಿ, 'ರಾಜ್ಯದ ಕ್ಷೀರ ಕ್ಷೇತ್ರದಲ್ಲಿ ಶ್ರೀಕೃಷ್ಣ ಮಿಲ್ಕ್ಸ್ ಗಮನಾರ್ಹ ಸಾಧನೆ ಮಾಡಿದೆ. ಉದ್ಯಮ ಕ್ಷೇತ್ರದಲ್ಲಿ ಬದ್ಧತೆ, ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳದೇ ಇರುವುದು ಮತ್ತು ತ್ವರಿತಗತಿಯ ಸೇವೆಯಿಂದಾಗಿ ಕಂಪನಿ ಯಶಸ್ಸು ಸಾಧಿಸಿ ಮಾದರಿಯಾಗಿದೆ' ಎಂದರು.

ಶ್ರೀಕೃಷ್ಣಾ ಮಿಲ್ಕ್ಸ್ ವ್ಯವಸ್ಥಾಪಕ ನಿರ್ದೇಶಕ ಹನುಮಂತ ಪೈ ಪ್ರಾಸ್ತಾವಿಕವಾಗಿ ಮಾತನಾಡಿ, ಕಂಪನಿ 25 ವರ್ಷ ಕಾಲ ನಡೆದುಬಂದ ದಾರಿ ಕುರಿತು ತಿಳಿಸಿದರು. ಕಳೆದ ಆರ್ಥಿಕ ಸಾಲಿನಲ್ಲಿ 65 ಕೋಟಿ ರೂ. ವ್ಯವಹಾರ ಮಾಡಿದ್ದು, ಎಲ್ಲರ ಸಹಕಾರ ಸಿಕ್ಕರೆ ಮುಂದಿನ ಎರಡು ವರ್ಷದಲ್ಲಿ ಶತಕೋಟಿ ರೂ. ವ್ಯವಹಾರ ಮಾಡುವ ವಿಶ್ವಾಸ ವ್ಯಕ್ತಪಡಿಸಿದರು. ಕಂಪನಿ ಅಭಿವೃದ್ಧಿಗೆ ಸಹಕಾರ ನೀಡಿದವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಬಿ.ಎಸ್.ನಾಯಕ, ಜಿ.ಎಸ್.ಕಾಮತ, ಡಾ. ಕೆ.ಎಸ್. ಶರ್ಮಾ, ವಿನಾಯಕ ತಿಳವಳ್ಳಿ, ಸಚ್ಚಿದಾನಂದ ಪ್ರಭು, ಪುಷ್ಪಾ ಪ್ರಭು, ದಿನೇಶ ಪೈ, ಪ್ರದೀಪ ಪೈ, ರಾಮಚಂದ್ರ ಕಾಮತ, ಡಾ. ಎಂ.ಎಂ. ಜೋಶಿ, ಡಾ. ರಾಜನ್ ದೇಶಪಾಂಡೆ, ಸತೀಶ ಪೈ, ಮಹೇಶ ಕಾಮತ, ರಾಜೀವಲೋಚನ ದಾಸ, ಇತರರು ಪಾಲ್ಗೊಂಡಿದ್ದರು. ನಂತರ ಗಂಗಾವತಿ ಪ್ರಾಣೇಶ, ನರಸಿಂಹ ಜೋಶಿ ತಂಡದಿಂದ ಹಾಸ್ಯ ಸಂಜೆ ಕಾರ್ಯಕ್ರಮ ಜರುಗಿತು.